# ಭಾರತದ ಅಸಂಘಟಿತ ವಲಯದ ಮಹಿಳಾ ಕಾರ್ಮಿಕರ ಸ್ಥಿತಿಗತಿ, ಸವಾಲುಗಳು ಮತ್ತು ಕಾಯಕಲ್ಪ

**ಅಶೋಕ್ ಕೆ.ಎ.***

**DOI: https://doi.org/10.5281/zenodo.21793296**

**ABSTRACT**

ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದ್ದರೂ, ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು ಇಂದಿಗೂ ಶೋಚನೀಯವಾಗಿವೆ. ವೇತನರಹಿತ ಗೃಹಕೃತ್ಯಗಳ ಜೊತೆಗೆ, ಕಡಿಮೆ ವೇತನ, ಅಸುರಕ್ಷಿತ ಹಾಗೂ ಅನಾರೋಗ್ಯಕರ ಕೆಲಸದ ವಾತಾವರಣ, ಸಾಮಾಜಿಕ ಭದ್ರತೆಯ ಕೊರತೆ ಮತ್ತು ಅಧಿಕ ಕೆಲಸದ ಅವಧಿಯಂತಹ ಅನೇಕ ಗಂಭೀರ ಸವಾಲುಗಳನ್ನು ಇವರು ಪ್ರತಿದಿನ ಎದುರಿಸುತ್ತಿದ್ದಾರೆ. ಸೂಕ್ತ ಕೌಶಲ್ಯ ತರಬೇತಿಯ ಕೊರತೆ ಹಾಗೂ ವಿಪರೀತ ಮಾನಸಿಕ ಒತ್ತಡಗಳು ಇವರ ಆರ್ಥಿಕ ಸಬಲೀಕರಣಕ್ಕೆ ಪ್ರಮುಖ ತೊಡಕಾಗಿವೆ. ಈ ಸಮಸ್ಯೆಗಳ ನಿವಾರಣೆಗಾಗಿ ಸರ್ಕಾರ ಮತ್ತು ಉದ್ಯಮದ ಮಾಲೀಕರು ಮಹಿಳಾ ಕಾರ್ಮಿಕರಿಗೆ ಕಡ್ಡಾಯ ಸಾಮಾಜಿಕ ಭದ್ರತೆ, ವಿಮಾ ಸೌಲಭ್ಯ, ಮಾತೃತ್ವ ರಜೆ ಮತ್ತು ಭದ್ರತಾ ವಾತಾವರಣವನ್ನು ನಿರ್ಮಿಸಿಕೊಡುವ ಅಗತ್ಯವಿದೆ. ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಾದ ಹಾಗೂ ಪರಿಣಾಮಕಾರಿ ಜಾರಿಯಿಂದ ಮಾತ್ರ ಈ ವಲಯದ ಮಹಿಳೆಯರ ನೈಜ ಕಾಯಕಲ್ಪ ಸಾಧ್ಯ.

**KEYWORDS:** ಅಸಂಘಟಿತ ವಲಯ, ಮಹಿಳಾ ಕಾರ್ಮಿಕರು, ಸಾಮಾಜಿಕ ಭದ್ರತೆ, ಆರ್ಥಿಕ ಸಬಲೀಕರಣ, ಕಾರ್ಮಿಕ ಸವಾಲುಗಳು.

* **ಡಾ. ಅಶೋಕ್ ಕೆ.ಎ.,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್. ಪುರ, ಗುಬ್ಬಿ.

**ಪೀಠಿಕೆ:**

ಭಾರತ ಒಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದ್ದು, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯ ಪಾತ್ರವನ್ನು ಪರಿಗಣಿಸದೆ ಹೋದರೆ ಅದು ಪರಿಪೂರ್ಣವಾದ ಭಾರತದ ಪ್ರಗತಿಯಾಗದು, ಭಾರತದ ಮೊದಲ ಪ್ರಧಾನಿಯಾದ ಜವಾಹರ್ ಲಾಲ್ ನೆಹರು ಅವರ ಪ್ರಕಾರ "ಒಂದು ದೇಶದ ಮಹಿಳೆಯರ ಸ್ಥಿತಿಗತಿಗಳನ್ನು ನೋಡಿದರೆ ಆ ದೇಶದ ಅಭಿವೃದ್ಧಿ ಸ್ಥಿತಿಯನ್ನು ತಿಳಿಯಬಹುದು ಎಂದಿದ್ದಾರೆ" ಆದ್ದರಿಂದ ಭಾರತದ ಅಭಿವೃದ್ಧಿಗೆ ಮಹಿಳೆಯರು ಭಾರತದ ಅಭಿವೃದ್ಧಿಯಲ್ಲಿ ಪರಿಣಾಮಕಾರಿಯಾದ ಪಾತ್ರ ವಹಿಸಿದ್ದು ಅವರ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ಭಾರತದ ಹೆಸರಾಂತ ಅರ್ಥಶಾಸ್ತ್ರಜ್ಞನಾದ ಹಾಗೂ ನೋಬಲ್ ಪ್ರಶಸ್ತಿ ಪುರಸ್ಕೃತರಾದ ಡಾ. ಅಮರ್ತ್ಯ ಸೇನ್ ರವರ ಪ್ರಕಾರ "ಸ್ತ್ರೀ ಮತ್ತು ಪುರುಷರು ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಸಮಾನವಾಗಿ ತೊಡಗಿದಾಗ ಮಾತ್ರ ಒಂದು ದೇಶ ಎಲ್ಲರನ್ನು ಒಳಗೊಳ್ಳುವ ಆರ್ಥಿಕತೆಯಾಗಲು ಸಾಧ್ಯ" ಭಾರತೀಯ ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರು ಅವಿಭಾಜ್ಯ ಅಂಗವಾಗಿದ್ದಾರೆ, ಭಾರತದ 2011ರ ಜನಗಣತಿಯ ಪ್ರಕಾರ ಮಹಿಳೆಯರು ಶೇಕಡ 48.5ರಷ್ಟು ಹಾಗೂ 51.5ರಷ್ಟು ಇದ್ದು, ಭಾರತದಲ್ಲಿ ಮಹಿಳೆ ಪುರುಷರಷ್ಟೇ ಸರಿಸಮಾನವಾಗಿದ್ದು ಭಾರತದ ಅಭಿವೃದ್ಧಿಗೆ ತಮ್ಮದೆ ಆದ ಕೊಡುಗೆಯನ್ನು ಕೊಡುತ್ತಾ ಬಂದಿದ್ದಾರೆ, ಅದರಲ್ಲೂ ಪುರುಷ ಪ್ರಧಾನವಾದ ಈ ದೇಶದಲ್ಲಿ ಮಹಿಳೆಯರು ಶತಶತಮಾನಗಳಿಂದ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಸ್ವಾತಂತ್ರ್ಯ ಹೀನರಾಗಿ ದಮನಿತ ಧ್ವನಿಯಾಗಿ ಶೋಷಣೆಗೆ ಒಳಗಾಗುತ್ತಾ ದೇಶದ ಉತ್ಪಾದನಾ ಕಾರ್ಯಗಳಿಂದ ದೂರವುಳ್ಳವಾರಾಗಿ, ಮಹಿಳೆಯರ ಶೋಷಣೆ ಅವ್ಯಾಹತವಾಗಿ ಅಬಲೆಗೊಳಿಸಿದೆ ಹಾಗೂ ಮನೆಯ ನಾಲ್ಕು ಗೋಡೆಗಳಲ್ಲಿ ಬಂಧಿಗೊಳಿಸಿ ಎಲ್ಲಾ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನಗಳನ್ನು ವಂಚಿತಗೊಳಿಸಿ ಮೂಲೆಗುಂಪಾಗಿಸಿವೆ ಮತ್ತು ಸ್ತ್ರೀ ಶಿಕ್ಷಣಕ್ಕೆ, ವ್ಯವಹಾರಕ್ಕೆ, ವಾಣಿಜ್ಯ ಚಟುವಟಿಕೆಗಳಿಗೆ, ಆಡಳಿತಾತ್ಮಕ ಹುದ್ದೆಗಳಿಗೆ, ನಿರ್ವಹಣಾ ಕಾರ್ಯಗಳಿಗೆ ಅವಕಾಶ ಕೊಡದೆ ಅವಕಾಶಗಳಿಂದ ದೂರವಿರಿಸಿ ಮಕ್ಕಳ ಜನ್ಮ ನೀಡಲು, ಅವುಗಳ ಲಾಲನೆ, ಪಾಲನೆ, ಪೋಷಕರ ಆರೈಕೆ ಹಾಗೂ ಇತರೆ ಸಂಭಾವನೆಗಳಿಲ್ಲದ ಹಾಗೂ ಆರ್ಥಿಕ ಚಟುವಟಿಕೆಗಳೆಂದು ಪರಿಗಣಿಸದ ಕೆಲಸಗಳಲ್ಲಿ ಮಿತಿಗೊಳಿಸುವುದರ ಮೂಲಕ ಆಕೆಯನ್ನು ದೇಶದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಪಡಿಸಿಕೊಂಡಿರಲಿಲ್ಲ. ದೇಶ ಸ್ವಾತಂತ್ರ್ಯ ಪಡೆದ ನಂತರ ಸರ್ಕಾರ ಮಹಿಳಾ ಸಬಲೀಕರಣಕ್ಕಾಗಿ ಸಂವಿಧಾನಾತ್ಮಕವಾದ ಹಕ್ಕುಗಳನ್ನು, ಹಲವಾರು ಕಾಯ್ದೆಗಳನ್ನ, ಮಹಿಳಾ ಮೀಸಲಾತಿ, ಸ್ತ್ರೀ ಶಿಕ್ಷಣ, ಕೌಶಲ್ಯಕ್ಕೆ ಮತ್ತು ತರಬೇತಿಗಳಂತಹ ಪ್ರೋತ್ಸಾಹ ನೀಡಿರುವುದರ ಪರಿಣಾಮವಾಗಿ, ಸ್ತ್ರೀ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿದ್ದು, ಮಹಿಳೆ ಅಬಲೆಯಲ್ಲ ಸಬಲೆ ಎನ್ನುವ ಮಟ್ಟಕ್ಕೆ ಮಹಿಳೆಯರು ಇಂದು ಪ್ರಸ್ತುತ ಭಾರತದ ಆರ್ಥಿಕತೆಯಲ್ಲಿ ಎಲ್ಲಾ ರಂಗಗಳಲ್ಲಿಯು ಮೇಲುಗೈ ಸಾಧಿಸಿ ಪುರುಷ ಸಮಾನ ಅವಕಾಶಗಳನ್ನು ಗಿಟ್ಟಿಸಿಕೊಂಡು ನಿಭಾಯಿಸುತ್ತಿರುವುದನ್ನು ಕಾಣಬಹುದಾಗಿದೆ, ಇದು ದೇಶದ ಆರ್ಥಿಕ ಪ್ರಗತಿಯ ಸೂಚಕವಾಗಿದೆ. ಮಹಿಳೆಯರಿಗೆ ಸಮಾನ ಶಿಕ್ಷಣದ

ಅವಕಾಶಗಳನ್ನು ಕಲ್ಪಿಸಿರುವುದರಿಂದ ಇಂದು ಶಾಲಾ–ಕಾಲೇಜುಗಳಲ್ಲಿ ಸ್ತ್ರೀಯರ ನೋಂದಣಿಯಾಗುತ್ತಿರುವುದು ಹೆಚ್ಚಾಗಿದ್ದು ಆದರೆ ಉತ್ಪಾದಾನಾ ಕಾರ್ಯಗಳಲ್ಲಿ ಹೆಚ್ಚಾಗಿ ಭಾಗವಹಿಸುವಿಕೆ ಕಂಡುಬರುತ್ತಿಲ್ಲವಾಗಿದೆ, ಪ್ರತಿ ಶತ ಶೇಕಡ 16 ರಷ್ಟು ಮಹಿಳೆಯರು ಮನೆಯಿಂದ ಹೊರಗಡೆ ಉದ್ಯೋಗದಲ್ಲಿ ಪಾಲ್ಗೊಳ್ಳುವಿಕೆಯಾಗಿದೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಮಹಿಳೆಯರು ಉದ್ಯೋಗದಲ್ಲಿ ಪಾಲ್ಗೊಳ್ಳುವ ಪ್ರಮಾಣ ಅಧಿಕವಾಗಿದೆ ಆದರೆ ಭಾರತದಲ್ಲಿ ಕಡಿಮೆಯಿರಲು ಕಾರಣವೆಂದರೆ ನಮ್ಮ ದೋಷಪೂರಿತ ಮಹಿಳಾಶಿಕ್ಷಣ, ತಾಂತ್ರಿಕ ಶಿಕ್ಷಣದ ಕೊರತೆ, ಸಾಮಾಜಿಕ, ಧಾರ್ಮಿಕ ಕಟ್ಟುಪಾಡುಗಳು, ಕೌಟುಂಬಿಕ ನಿರ್ಬಂಧಗಳು ಮಹಿಳೆಯರನ್ನು ಸಾರ್ವಜನಿಕ ಕೆಲಸಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವಿಕೆಯನ್ನು ನಿರ್ಬಂಧಿಸುತ್ತಿವೆ.

ಪ್ರಸ್ತುತ ಲೇಖನವು ಭಾರತೀಯ ಮಹಿಳೆಯರಿಗೆ ಸಂಘಟಿತ ವಲಯದಲ್ಲಿರುವ ಉದ್ಯೋಗಾವಕಾಶಗಳು ಮತ್ತು ಈ ವಲಯದಲ್ಲಿ ಮಹಿಳೆಯರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಬೆಳಕು ಚೆಲ್ಲುತ್ತದೆ, ಸಂಘಟಿತ ವಲಯ ಎಂದರೆ ಯಾವ ಉದ್ಯೋಗವು ಕಾಯಂ ಅಲ್ಲದ, ಸಾಮಾಜಿಕ ಭದ್ರತೆ ಇಲ್ಲದ, ಕೌಶಲ್ಯರಹಿತವಾದ, ಕೆಳದರ್ಜೆಯ, ದೀರ್ಘಾವಧಿಯ ದುಡಿಮೆ ಕಡಿಮೆ ವೇತನಗಳ ಕೆಲಸಗಳಾಗಿದ್ದು, ಕೌಶಲ್ಯದ ಅವಶ್ಯಕತೆ ಅಷ್ಟಾಗಿ ಅವಶ್ಯಕತೆ ಇಲ್ಲದ, ನಿರುದ್ಯೋಗ ಭತ್ಯೆ ಇಲ್ಲದ ಕೆಲಸಗಳಾಗಿವೆ.

**ಭಾರತದಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ಕೆಲಸಗಳು:**

**ವೇತನರಹಿತ/ಸಂಭಾವನೆರಹಿತ ಉದ್ಯೋಗಗಳು :**

**ಅ) ಮನೆಯ ಪ್ರಾಥಮಿಕ ಕೆಲಸಗಳು:**

ಮಹಿಳೆಯರು ಪ್ರಾಥಮಿಕವಾಗಿ ಮಾಡಬೇಕಾದ ಮಹಿಳೆಯರು ಅಗತ್ಯವಾಗಿ ಮಾಡಬೇಕಾದ ಕೆಲಸಗಳಾದ ಮಕ್ಕಳ ಪಾಲನೆ, ಮಕ್ಕಳ ಆರೈಕೆ, ಮಕ್ಕಳ ಶಿಕ್ಷಣದ ಜವಾಬ್ದಾರಿ ಮತ್ತು ಮೇಲ್ವಿಚಾರಣೆ, ಮನೆ ಕೆಲಸ, ಪಾಲಕರ ಪೋಷಣಾ ಕೆಲಸಗಳು ಅಂದರೆ ಅತ್ತೆ, ಮಾವ ಮತ್ತು ಕುಟುಂಬದ ಸದಸ್ಯರ ಆರೈಕೆಯ ಹೊಣೆಗಾರಿಕೆಗಳು, ಇವುಗಳನ್ನು ಯಾವ ದೇಶದಲ್ಲಿಯು ಆರ್ಥಿಕ ಚಟುವಟಿಕೆಗಳೆಂದು ಪರಿಗಣಿಸಿಲ್ಲ ಹಾಗೂ ಸಂಭಾವನೆ ಇಲ್ಲದ ಕೆಲಸಗಳಾಗಿವೆ.

**ಮನೆಯ ಇತರೆ ಕೆಲಸಗಳು:**

ಮನೆಯ ಇತರೆ ಕೆಲಸಗಳಾದ ಪಾತ್ರೆ ಶುಭ್ರಗೊಳಿಸಿಕೊಳ್ಳುವುದು, ಆಹಾರ ಸಿದ್ಧತೆಗೆ ಅಗತ್ಯ ವಸ್ತುಗಳ ಸಂಗ್ರಹಣೆ ಮತ್ತು ಆಹಾರದ ಸಿದ್ಧತೆ, ಬಟ್ಟೆ ಶುಭ್ರಗೊಳಿಸುವುದು, ಪೂಜಾ ಕೈಂಕರ್ಯಗಳು, ಕೃಷಿ ಸಹ–ಚಟುವಟಿಕೆಗಳಾದ ಪ್ರಾಣಿಗಳ ಆರೈಕೆ, ಹೈನುಗಾರಿಕೆ ಮತ್ತು ಪತಿಯ ಕೃಷಿ ಚಟುವಟಿಕೆಗಳಿಗೆ ಸಹಾಯ ಮಾಡುವುದು,

**ಸಂಭಾವನೆ ಪಡೆಯುವ ಕೆಲಸಗಳು:**

**ಅ) ಅಸಂಘಟಿತ ವಲಯದಲ್ಲಿನ ಕೆಲಸಗಳು;**

ಭಾರತದಲ್ಲಿ ಇಂದು ಹೆಚ್ಚಾಗಿ ಅಸಂಪ್ರದಾಯಿಕ ಅಥವಾ ಅಸಂಘಟಿತ ವಲಯದ ಉದ್ಯೋಗಗಳಲ್ಲಿ ಶೇಕಡ 80 ಕ್ಕಿಂತ ಹೆಚ್ಚು ಮಹಿಳೆಯರು ಕೆಲಸ ಮಾಡುತ್ತಿದ್ದಾರೆ, ಈ ಕೆಲಸಗಳು ಪುರುಷರು ಮಾಡುವ ಉದ್ಯೋಗಗಳಿಗಿಂತ ಭಿನ್ನವಾಗಿದ್ದು, ಮಹಿಳೆಯರ ಸೂಕ್ಷ್ಮತೆ, ಸಣ್ಣಬೆರಳುಗಳಿಗೆ ಸರಿಹೊಂದುವ, ಸಂಯಮ, ತಾಳ್ಮೆಯಿಂದ, ಸಹನೆಯಿಂದ ನಿರ್ವಹಿಸುವಂತಹ ಉದ್ಯೋಗಗಳಾಗಿದ್ದು, ಮಹಿಳೆಯರ ಕೌಶಲ್ಯಕ್ಕೆ ಸರಿಹೊಂದುವಂತ ಉದ್ಯೋಗಗಳು, ಕಡಿಮೆ ವೇತನಕ್ಕೆ ಹೆಚ್ಚು ಸಮಯದ ವರೆಗೆ ದುಡಿಯುವ ಕೆಲಸಗಳಾಗಿದ್ದು, ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸಬಲೀಕರಣಕ್ಕೆ, ಕುಟುಂಬದ ಬಡತನದಿಂದ, ಕುಟುಂಬದ ಜವಾಬ್ದಾರಿಯು ಮಹಿಳೆಯ ಮೇಲಿದ್ದಾಗ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಮಕ್ಕಳ ಮದುವೆಯ ಖರ್ಚು, ಮನೆ ಕಟ್ಟಲು ಮಾಡಿದ ಸಾಲ ತೀರಿಸಲು ಹಾಗೂ ಗಂಡನ ದುಡಿಮೆ ಮನೆಯ ನಿರ್ವಹಣೆಗೆ ಸಾಕಾಗದಾಗ ಮತ್ತು ಗಂಡನ ಅನಾರೋಗ್ಯದಿಂದ ಮನೆಯ ನಿರ್ವಹಣೆಗಾಗಿ ಅನಿವಾರ್ಯವಾಗಿ ಮಹಿಳೆಯರು ಇಂತಹ ಉದ್ಯೋಗಗಳಲ್ಲಿ ಮನಸ್ಸು ಇಲ್ಲದೆ ತೊಡಗಿಸಿಕೊಳ್ಳಬೇಕಾದ ಪರಿಸ್ಥಿತಿ ಮಹಿಳೆಯರನ್ನು ಇಂತಹ ಉದ್ಯೋಗಗಳಲ್ಲಿ ಆಶ್ರಯಿಸುತ್ತಿದೆ. ಅಸಂಪ್ರದಾಯಿಕ ವಲಯದ ಉದ್ಯೋಗಗಳು ಎಂದರೆ ಮನೆಯ ಕೆಲಸದ ನಡುವೆ ಅಥವಾ ಬಿಡುವಿನ ಸಮಯದಲ್ಲಿ ಮಹಿಳೆ ಹಣಕ್ಕಾಗಿ ಮಾಡುವ ಕೆಲಸಗಳು ಅಥವಾ ಶ್ರಮಸಾಂದ್ರ ಕೈಗಾರಿಕೆಗಳಾದ ಬೀಡಿ ಸುತ್ತುವುದು, ಸಿಗರೇಟ್ ಸುತ್ತುವುದು, ಊದುಬತ್ತಿ ತಯಾರಿಕೆ, ಮೇಣದ ಬತ್ತಿ ತಯಾರಿಕೆ, ಬಟ್ಟೆ ಹೊಲೆಯುವುದು, ಕಸೂತಿ ಕಲೆ, ಹಾಗೂ ಮನೆಯ ಪರಂಪರಾಗತವಾದ ಕುಲಕಸುಬುಗಳಲ್ಲಿ ತೊಡಗುವುದು, ಇದಲ್ಲದೆ ಮಹಿಳೆಯರು ಇತ್ತೀಚಿನ ದಿನಗಳಲ್ಲಿ ಮನೆಯ ಹೊರಗೆ ಅನೇಕ ಉದ್ಯೋಗಗಳಲ್ಲಿ ಕಂಡುಬರುತ್ತಿದ್ದಾರೆ ಅವುಗಳೆಂದರೆ; ಹೋಟೆಲ್‌ಗಳಲ್ಲಿ, ಪೆಟ್ರೋಲ್ ಬಂಕ್‌ಗಳಲ್ಲಿ, ಕಾರ್ಪೆಟ್‌ಗಳ ತಯಾರಿಕಾ ಉದ್ಯಮಗಳಲ್ಲಿ, ದಿನಸಿಗಳ ಪ್ಯಾಕ್ ಮಾಡುವುದರಲ್ಲಿ, ತೆಂಗಿನ ನಾರು ಕೈಗಾರಿಕೆಗಳಲ್ಲಿ, ಸೋಪು ಕೈಗಾರಿಕೆಗಳಲ್ಲಿ, ಅಕ್ಕಿಯ ಗಿರಣಿಗಳಲ್ಲಿ, ಇಟ್ಟಿಗೆ ಭಟ್ಟಿಗಳಲ್ಲಿ, ಚಾಪೆ ತಯಾರಿಕೆಯ ಕೈಗಾರಿಕೆಗಳಲ್ಲಿ, ಪೊರಕೆ ತಯಾರಿಕಾ ಕೈಗಾರಿಕೆಗಳಲ್ಲಿ, ಔಷಧಿಗಳ ಪ್ಯಾಕ್ ಮಾಡುವ ಕೈಗಾರಿಕೆಗಳಲ್ಲಿ, ಸೆಣಬಿನ ಉಪ-ಉತ್ಪನ್ನಗಳ ತಯಾರಿಕಾ ಕೈಗಾರಿಕೆಗಳಲ್ಲಿ, ಗಾರ್ಮೆಂಟ್ಸ್ ಕೈಗಾರಿಕೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಮಹಿಳಾ ಕಾರ್ಮಿಕರನ್ನು ಅನೇಕ ವಿಧದ ಸಹಾಯಕ ಕೆಲಸಗಳನ್ನು ನಿರ್ವಹಿಸಲು ಹಾಗೂ ಜಾಗತೀಕರಣದಿಂದ, ಖಾಸಗೀಕರಣದ ಫಲದಿಂದ ಭಾರತದ ಶ್ರಮಸಾಂದ್ರ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯ ಪ್ರವೇಶಾಧಿಕಾರ ದೊರಕಿದ್ದು, ಖಾಸಗಿ ಉತ್ಪಾದನಾಕಾರರು ಭಾರತೀಯ ಮಹಿಳಾ ಶ್ರಮವನ್ನು ಬಳಸಿಕೊಂಡು ಹೆಚ್ಚು ಲಾಭಗಳಿಸುತ್ತಿದ್ದಾರೆ ಅಲ್ಲದೆ ಮಹಿಳೆಯರಿಗೆ ಉದ್ಯೋಗಗಳನ್ನು ಕಲ್ಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆ. ಇದು ಭಾರತದ ಮಹಿಳಾ ಸಬಲೀಕರಣಕ್ಕೆ ಕಾರಣವಾಗಿದೆ.

**ಆ) ಸಂಘಟಿತ ವಲಯದಲ್ಲಿನ ಮಹಿಳಾ ಉದ್ಯೋಗಗಳು**

ಸಂಘಟಿತ ವಲಯದಲ್ಲಿ ಮಹಿಳೆಯರ ಕೆಲಸಗಳನ್ನು ಸಂಪ್ರದಾಯಿಕ ವಲಯದ ಉದ್ಯೋಗಗಳೆಂದು ಕರೆಯಲ್ಪಡುತ್ತಾರೆ, ಅವುಗಳೆಂದರೆ; ಮಹಿಳೆ ಯಾವ ಕೆಲಸದಲ್ಲಿ ಕಾಯಂ ವೇತನ, ಸಾಮಾಜಿಕ ಭದ್ರತೆ, ಸುರಕ್ಷಿತ ಹಾಗೂ ಆರೋಗ್ಯಕರವಾದ ವಾತಾವರಣದಲ್ಲಿ ಉದ್ಯೋಗ ಮಾಡುವುದನ್ನು, ನಿವೃತ್ತಿ ವೇತನ, ಹಲವಾರು ರೀತಿಯ ಭತ್ಯೆಗಳು ಲಭ್ಯವಿರುವಂತಹ ಕೆಲಸಗಳಲ್ಲಿ ಮಹಿಳೆಯು ಪುರುಷರಿಗೆ ದೊರಕುವ ಸ್ಥಾನಮಾನಗಳನ್ನು ಮಹಿಳೆಗೂ ಲಭ್ಯವಿರುತ್ತವೆ, ಇಂತಹ ಉದ್ಯೋಗಗಳನ್ನು ಮಹಿಳೆಯರಿಗೆ ದೊರಕಿಸಿಕೊಡಲು ಸರ್ಕಾರ ಮಹಿಳೆಯರಿಗೆ ಮೀಸಲಾತಿ ಹಾಗೂ ಅರ್ಹತೆಯ ವಯೋಮಿತಿಯನ್ನು ಪುರುಷರಿಗಿಂತ ಹೆಚ್ಚಿನದಾಗಿ ಕಲ್ಪಿಸಲಾಗಿದ್ದು, ಮಹಿಳೆಯರು ಹೆಚ್ಚು ಹೆಚ್ಚಾಗಿ ಭಾಗವಹಿಸಲು ಅನೇಕ ಪ್ರೋತ್ಸಾಹಗಳನ್ನು ಕಲ್ಪಿಸುತ್ತಿದೆ.

**ಸ್ವಯಂ-ಉದ್ಯೋಗಗಳು:**

ಮಹಿಳೆಯರು ತಮ್ಮದೆ ಆದ ಹೂಡಿಕೆಯ ಆಧಾರದ ಮೇಲೆ ಹಲವು ರೀತಿಯ ಸ್ವಂತ ಉದ್ಯಮಗಳನ್ನು ಸ್ಥಾಪಿಸಿಕೊಂಡು ದೇಶದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕಾಣಬಹುದು.

**ಭಾರತದಲ್ಲಿ ಅಸಂಘಟಿತ ವಲಯದ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು:**

**ಕಡಿಮೆ ವೇತನ:** ಭಾರತದ ಅರ್ಥವ್ಯವಸ್ಥೆಯಲ್ಲಿ ಮಹಿಳೆಯರು ಕೆಳಹಂತದ ಸಹಾಯಕ ಹಾಗೂ ತಾಂತ್ರಿಕೇತರ ಉದ್ಯೋಗಗಳಲ್ಲಿ ಹೆಚ್ಚಾಗಿದ್ದು ಅವರ ವೇತನ ಅಥವಾ ಸಂಭಾವನೆ ನೆರೆಯ ರಾಷ್ಟ್ರಗಳಿಗೆ ಹಾಗೂ ಬೇರೆ ದೇಶಗಳಿಗೆ ಹೋಲಿಸಿದಾಗ ತುಂಬ ಕಡಿಮೆ ಇದ್ದು, ಸರಾಸರಿ ಪ್ರತಿದಿನಕ್ಕೆ 250 ರಿಂದ 300 ರೂಗಳಿದ್ದು ಅಥವಾ ಇದು ಚೀನಾ, ಆಗ್ನೇಯ ರಾಷ್ಟ್ರಗಳಿಗಿಂತ, ಆಫ್ರೀಕಾ ರಾಷ್ಟ್ರಗಳಿಗಿಂತ ತುಂಬ ಕಡಿಮೆ ಬಹುತೇಕ ಮಹಿಳಾ ಕೇಂದ್ರಿತ ಉದ್ಯೋಗಗಳಲ್ಲಿ ಪ್ರತಿ ಮಾಸಿಕ 8000 ರಿಂದ 10,000 ರೂಗಳ ವೇತನ ಪಡೆಯುತ್ತಿದ್ದು ಇದು ಭಾರತದ ಸಂಘಟಿತ ಅಥವಾ ಅಸಂಪ್ರದಾಯಿಕ ವಲಯದಲ್ಲ ಮಹಿಳಾ ಕಾರ್ಮಿಕರ ಜೀವನಮಟ್ಟವನ್ನು ಉನ್ನತೀಕರಿಸಿ ಆರ್ಥಿಕ ಸಬಲೀಕರಣ ಹೊಂದಲು ಸಾಧ್ಯವಾಗುತ್ತಿಲ್ಲ, ಜೀವನ ನಿರ್ವಹಣೆಗೆ ಸಾಕಾಗುತ್ತಿಲ್ಲ

**ಅಸುರಕ್ಷಿತ ಉದ್ಯೋಗಗಳು:** ಅಸಂಘಟಿತ ವಲಯದ ಉದ್ಯಮಗಳಲ್ಲಿ ಕೆಲಸಮಾಡುತ್ತಿರುವ ಬಹುತೇಕ ಕಾರ್ಮಿಕರು ಅಸುರಕ್ಷಿತ ಉದ್ಯೋಗ ಪ್ರದೇಶಗಳಲ್ಲಿ ಕೆಲಸಮಾಡುತ್ತಿದ್ದಾರೆ, ಯಂತ್ರಗಳ ಬಳಿ ಸುರಕ್ಷಿತವಲ್ಲದ ಪ್ರದೇಶದಲ್ಲಿ, ಅಪಾಯಕಾರಿ ಉತ್ಪಾದನಾ ಪ್ರದೇಶಗಳಲ್ಲಿ, ರಾಸಾಯನಿಕಗಳ ಬಳಕೆ ಮಾಡುವಂತಹ ಉದ್ಯೋಗಗಳಲ್ಲಿ, ವಿದ್ಯುತ್ ಬಳಸಿಕೊಂಡು ಮಾಡುವಂತಹ ಕೆಲಸಗಳಲ್ಲಿ, ಅಗ್ನಿಯ ಅವಘಡದ ನಂದಿಸುವ ಸುರಕ್ಷಿತ ಸೌಲಭ್ಯಗಳಿಲ್ಲದ ಉದ್ಯಮಗಳಲ್ಲಿ, ಅಸುರಕ್ಷಿತ ಹೋಟೆಲ್ ಉದ್ಯಮಗಳಲ್ಲಿ, ಅನೇಕ ಉದ್ಯೋಗಗಳಲ್ಲಿ ಜೀವಕ್ಕೆ ಆಪತ್ತು ಇರುವಂತಹದನ್ನು ಗಮನಿಸಬಹುದು, ಸರಿಯಾದ ನೆರಳು, ಶುದ್ಧ ಗಾಳಿ, ಬೆಳಕು, ಧೂಳು, ವಾಸನೆ ಮತ್ತು ಉಸಿರುಕಟ್ಟುವಂತಹ ಉದ್ಯೋಗಗಳಲ್ಲಿ ಮಹಿಳಾ

ಕಾರ್ಮಿಕರು ಉತ್ಪಾದನಾ ಕಾರ್ಯಗಳಲ್ಲಿ ನಿರತವಾಗಿದ್ದು ಇದು ಭಾರತೀಯ ಮಹಿಳಾ ಕಾರ್ಮಿಕರ ಉತ್ಪಾದನಾ ದಕ್ಷತೆಯ ಮೇಲೆ ಪರಿಣಾಮ ಬೀರುತ್ತಿದ್ದು ಮಹಿಳಾ ಕಾರ್ಮಿಕರ ಸ್ಥಿತಿಗತಿಗಳನ್ನು ಅದೋಗತಿಗೆ ದೂಡಿದೆ.

**ಆರೋಗ್ಯಕರವಲ್ಲದ ಉದ್ಯೋಗಗಳು:** ಭಾರತದ ಅಸಂಘಟಿತ ವಲಯದ ಮಹಿಳಾ ಉದ್ಯೋಗಿಗಳು ಆರೋಗ್ಯಕರವಲ್ಲದ, ಬಹುತೇಕ ಉದ್ಯೋಗಿಗಳು ಕೆಲಸದ ಒತ್ತಡದಿಂದ ಅನಿಮಿಯಾ ದಂತ ರೋಗಗಳನ್ನು ಎದುರಿಸುತ್ತಾ ಕೆಲಸ ನಿರ್ವಹಿಸುತ್ತಿದ್ದಾರೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರಕಾರ 2024 ರಲ್ಲಿ ಶೇಕಡ 71 ಕ್ಕಿಂತ ಹೆಚ್ಚು ಕಾರ್ಮಿಕರು ಪರಿಸರದ/ವಾತಾವರಣದ ಬದಲಾವಣೆಯಿಂದ ಅಧಿಕ ಬಿಸಿಲದ ಪರಿಣಾಮವನ್ನು ಎದುರಿಸುತ್ತಿದ್ದಾರೆ.

**ಸಾಮಾಜಿಕ ಭದ್ರತಾ ಸೌಲಭ್ಯಗಳ ಕೊರತೆ:** ಭಾರತದಲ್ಲಿ ಸಂಘಟಿತ ವಲಯದ ಉದ್ಯೋಗಿಗಳಿಗೆ ಒದಗಿಸಲಾಗುತ್ತಿರುವ ಸಾಮಾಜಿಕ ಭದ್ರತಾ ಸೌಲಭ್ಯಗಳು ಅಸಂಘಟಿತ ಅಥವಾ ಅಸಂಪ್ರದಾಯಿಕ ವಲಯದ ಮಹಿಳಾ ಕಾರ್ಮಿಕರಿಗೆ ಲಭ್ಯವಿಲ್ಲ, ಬಹುತೇಕ ಮಹಿಳಾ ಕಾರ್ಮಿಕರು ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ, ಸಾಮಾಜಿಕ ಭದ್ರತಾ ಸೌಲಭ್ಯಗಳೆಂದರೆ ಆರೋಗ್ಯ ಸೌಲಭ್ಯ, ಪ್ರಥಮ ಚಿಕಿತ್ಸಾ ಸೌಲಭ್ಯ, ಸಾಮಾನ್ಯ ವಿಮೆ, ಆರೋಗ್ಯ ವಿಮೆ, ವೇತನಸಹಿತ ಮಾತೃತ್ವ ರಜೆ ಸೌಲಭ್ಯ, ಶಿಶು ಪಾಲನಾ ರಜೆ, ನಿವೃತ್ತಿ ವೇತನ, ಅನೇಕ ರೀತಿಯ ಭತ್ಯೆಗಳು, ಪ್ರಾವಿಡೆಂಟ್ ಫಂಡ್ ಸೌಲಭ್ಯ, ಈ ಎಲ್ಲಾ ಸೌಲಭ್ಯಗಳನ್ನು ಉದ್ಯಮ ಮಾಲೀಕರುಗಳು ಮಹಿಳಾ ಕಾರ್ಮಿಕರುಗಳಿಗೂ ಸೇರಿದಂತೆ ಒದಗಿಸಿಲ್ಲ. ಮಹಿಳಾ ಕಾರ್ಮಿಕರು ಈ ಸೌಲಭ್ಯಗಳಿಂದ ವಂಚಿತರಾಗಿ ಅದು ಅವರ ಜೀವನದ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದ್ದು ಮಹಿಳಾ ಕಾರ್ಮಿಕರ ಉತ್ಪಾದಕತೆಯ ಮೇಲು ಪರಿಣಾಮ ಬೀರುತ್ತಿದೆ.

**ಅಧಿಕ ಕೆಲಸದ ಅವಧಿ:** ಅಸಂಪ್ರದಾಯಿಕ ವಲಯದಲ್ಲಿ ಉದ್ಯೋಗಿಗಳು ಅಧಿಕ ಅವಧಿಗೆ ಕಾರ್ಯ ನಿರ್ವಹಿಸುತ್ತಿದ್ದಾರೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ನಿಗದಿತ ಕಾಲಾವಧಿಗಿಂತ ಹೆಚ್ಚು ಅವಧಿ ಕೆಲಸ ನಿರ್ವಹಿಸುತ್ತಿದ್ದು ಆದರೆ ಸಂಭಾವನೆ ಆ ಅವಧಿಗೆ ಪಡೆಯುತ್ತಿಲ್ಲ, ಕೆಲವೊಂದು ಸಮಯದಲ್ಲಿ ಹೆಚ್ಚು ಉತ್ಪಾದನಾ ಹೊರೆ ಮಾಲೀಕನ ಮೇಲೆ ಇದ್ದಾಗ ಇನ್ನು ಹೆಚ್ಚಿನ ಅವಧಿಯ ಕೆಲಸವನ್ನು ಅನಿವಾರ್ಯವಾಗಿ ಮಾಡಬೇಕಾಗಿದ್ದು ಇದು ಮಹಿಳಾ ಕಾರ್ಮಿಕರ ಮಾನಸಿಕ ಒತ್ತಡಕ್ಕೆ ಕಾರಣವಾಗಿದೆ.

**ಕೌಶಲ್ಯ ತರಬೇತಿಯ ಕೊರತೆ:** ಕೌಶಲ್ಯ, ಶಿಕ್ಷಣ ಮತ್ತು ಜ್ಞಾನ ಮಹಿಳೆಯರಿಗೆ ಹೆಚ್ಚು ಉದ್ಯೋಗಗಳ ಅವಕಾಶವನ್ನು ಕಲ್ಪಿಸುತ್ತದೆ ಆದರೆ ಭಾರತದ ಅಸಂಪ್ರದಾಯಿಕ ವಲಯದ ಮಹಿಳಾ ಕಾರ್ಮಿಕರ ಕೌಶಲ್ಯಕ್ಕೂ, ಉದ್ಯಮಗಳ ಕೌಶಲ್ಯದ ಅಗತ್ಯತೆಗೂ ವ್ಯತ್ಯಾಸವನ್ನು ಕಾಣಬಹುದು ಆದರೂ ಮಹಿಳಾ ಕಾರ್ಮಿಕರು ಕೆಳ ಹಂತದ, ತಾಂತ್ರಿಕೇತರ ಸಹಾಯಕ ಕೆಲಸಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ ಅಂತಹ

ಉದ್ಯೋಗಗಳಿಗೆ ಉತ್ಪಾದನಾಕಾರರು ಹೆಚ್ಚಾಗಿ ಕೌಶಲ್ಯ ಹೊಂದಿದವರನ್ನು ನೇಮಕ ಮಾಡಿಕೊಳ್ಳುವುದಿಲ್ಲ ಮತ್ತು ತರಬೇತಿಗೆ ಹಣವನ್ನು ಖರ್ಚುಮಾಡಲು ಸಿದ್ಧರಿರುವುದಿಲ್ಲ,

**ಅಧಿಕ ಮಾನಸಿಕ ಒತ್ತಡದಲ್ಲಿ ಕೆಲಸ ನಿರ್ವಹಣೆ:** ಸಾಮಾನ್ಯವಾಗಿ ಮಹಿಳೆಯರು ತಮ್ಮ ಮನೆಯ ನಿತ್ಯ ಕೆಲಸದ ಜೊತೆಗೆ ಅಸಂಪ್ರದಾಯಿಕ ವಲಯದಲ್ಲಿನ ಶ್ರಮಸಾಂದ್ರ ಕೆಲಸಗಳಲ್ಲಿ ಹೆಚ್ಚಾಗಿದ್ದು ಮನೆಯ ಜವಾಬ್ದಾರಿಗಳ ಜೊತೆಗೆ ಕೆಲಸದ ಒತ್ತಡವು ಬಹುತೇಕ ಮಹಿಳಾ ಕಾರ್ಮಿಕರನ್ನು ಮಾನಸಿಕ ಒತ್ತಡದಲ್ಲಿ ಕೆಲಸ ನಿರ್ವಹಿಸುವಂತೆ ಮಾಡಿದೆ ಇದರಿಂದ ಮಹಿಳಾ ಕಾರ್ಮಿಕರು ಹೆಚ್ಚು ದಕ್ಷತೆಯಿಂದ ಉತ್ಪಾದನಾ ಚಟುವಟಿಕೆಗಳಲ್ಲಿ ಕೆಲಸಮಾಡಲು ಸಾಧ್ಯವಾಗುತ್ತಿಲ್ಲ.

**ಸಾರಿಗೆ ಸೌಲಭ್ಯದ ಕೊರತೆ:** ಅಸಂಘಟಿತ ವಲಯದ ಕಾರ್ಮಿಕರು ಇಂದು ಹೆಚ್ಚಾಗಿ ಸಾರಿಗೆ ಸೌಲಭ್ಯದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮಹಿಳಾ ಕಾರ್ಮಿಕರು ಮನೆಯಿಂದ ಉತ್ಪಾದನಾ ಪ್ರದೇಶಕ್ಕೆ ತೆರಳಲು ಹೆಚ್ಚಾಗಿ ಮ್ಯಾಕ್ಸಿಕ್ಯಾಬ್‌ಗಳನ್ನು, ಆಟೋಗಳನ್ನು, ತ್ರಿಚಕ್ರ ವಾಹನಗಳನ್ನು ಅವಲಂಬಿಸಿದ್ದು, ಪ್ರಯಾಣ ತ್ರಾಯದಾಯಕವಾಗಿದೆ ಹಾಗೂ ತಮ್ಮ ಸಂಭಾವನೆಯ ಬಹು ಪಾಲನ್ನು ಸಾರಿಗೆ ವೆಚ್ಚಕ್ಕಾಗಿ ಖರ್ಚು ಮಾಡುತ್ತಿದ್ದು ಉಳಿತಾಯದ ಪ್ರಮಾಣ ಕಡಿಮೆಯಾಗುತ್ತಿದೆ.

**ಕಾಯಕಲ್ಪ:**

ಭಾರತ ಸರ್ಕಾರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಅಸಂಪ್ರದಾಯಿಕ ವಲಯದ ಕಾರ್ಮಿಕರ ಸುಧಾರಣೆಗೆ ಅನೇಕ ಕಾರ್ಯಕ್ರಮಗಳನ್ನು ಕಲ್ಪಿಸಿದಾಗ ಮಾತ್ರ ಈ ವಲಯದ ಕಾಯಕಲ್ಪ ಸಾಧ್ಯ. ಅವುಗಳೆಂದರೆ;

1. ಮಹಿಳಾ ಕಾರ್ಮಿಕರಿಗೆ ಕೆಲಸದ ಪ್ರದೇಶದಲ್ಲಿ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರ ಮುನ್ನೆಚ್ಚರಿಕೆ ಒದಗಿಸಬೇಕು.
2. ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಮಹಿಳಾ ಕಾರ್ಮಿಕರಿಗೆ ಸರ್ಕಾರದ ಮೇಲ್ವಿಚಾರಣೆಯಲ್ಲಿ ಒದಗಿಸಬೇಕು.
3. ವಿಮಾ ಸೌಕರ್ಯಗಳನ್ನು ಮಹಿಳಾ ಕಾರ್ಮಿಕರಿಗೆ ಒದಗಿಸಬೇಕು.
4. ಮಾತೃತ್ವ ರಜೆಯನ್ನು ಮಹಿಳೆಯರಿಗೆ ಸರಿಯಾದ ರೀತಿಯಲ್ಲಿ ಒದಗಿಸಬೇಕು ಮತ್ತು ಕೆಲಸದ ಪ್ರದೇಶದಲ್ಲಿ ಹಾಲುಣಿಸುವ ಮಹಿಳೆಯರಿಗೆ ವಿಶ್ರಾಂತಿ ಸ್ಥಳ ಒದಗಿಸಬೇಕು.
5. ಉದ್ಯಮ ಮಾಲೀಕರು ಸಾರಿಗೆ ವ್ಯವಸ್ಥೆಯನ್ನು ಒದಗಿಸಬೇಕು

**ಉಪಸಂಹಾರ:**

ಅಸಂಪ್ರದಾಯಿಕ ವಲಯದ ಕಾರ್ಮಿಕರು ದೇಶದ ಪ್ರಗತಿಗೆ ತಮ್ಮದೆ ಆದ

ರೀತಿಯಲ್ಲಿ ಕೊಡುಗೆಯನ್ನು ನೀಡುತ್ತಿದ್ದು ಭಾರತದ ಅಭಿವೃದ್ಧಿಯಲ್ಲಿ ಇವರ ಪಾತ್ರ ಬಹಳ ಮಹತ್ವವಾದುದಾಗಿದ್ದು, ಇವರ ಪಾತ್ರವನ್ನು ಕಡೆಗಣಿಸುವಂತಿಲ್ಲ, ಬಹುತೇಕ ತಾಂತ್ರಿಕೇತರ ಹಾಗೂ ಸಹಾಯಕ ಕೆಲಸಗಳಲ್ಲಿ ಇವರ ಪಾತ್ರ ಅಲ್ಲಗಳೆಯುವಂತಿಲ್ಲ, ಆದರೆ ಅಸಂಪ್ರದಾಯಿಕ ವಲಯದ ಕಾರ್ಮಿಕರು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಈ ಸಮಸ್ಯೆಗಳಿಗೆ ಪರಿಹಾರ ಮಹಿಳಾ ಕಾರ್ಮಿಕರಿಗೆ ಸೂಕ್ತ ಶಿಕ್ಷಣ ಒದಗಿಸುವುದು, ತರಬೇತಿಯನ್ನು ಕೊಡುವುದು, ಆರ್ಥಿಕ ಶಿಸ್ತಿನ ಬಗ್ಗೆ ಅರಿವು ಮೂಡಿಸುವುದು, ವೇತನದ ಜೊತೆಯಲ್ಲಿ ವಿವಿಧ ಭತ್ಯೆಗಳನ್ನು ಕಲ್ಪಿಸುವುದರಿಂದ ಈ ವಲಯದ ಮಹಿಳಾ ಕಾರ್ಮಿಕರ ಆರ್ಥಿಕ ಸಬಲೀಕರಣಕ್ಕೆ ಒತ್ತು ಕೊಡಬಹುದು ಹಾಗೂ ಸರ್ಕಾರದ ಕಾರ್ಮಿಕ ಕಾನೂನುಗಳ ಸುಧಾರಣೆ ಹಾಗೂ ಸೂಕ್ತ ರೀತಿಯಲ್ಲಿ ಜಾರಿಗೊಳಿಸಿದಾಗ ಮಹಿಳಾ ಕಾರ್ಮಿಕರು ಹೆಚ್ಚು ದಕ್ಷತೆಯಿಂದ ಕೆಲಸಮಾಡಿ ದೇಶದ ಪ್ರಗತಿಗೆ ದುಡಿಯಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


6. ILO (2025), "The State of Social Justice: A Work in Progress", ILO flagship report, Geneva 22, Switzerland.
7. Chandraprabha M. Patgar (2021), "Role of Women in Social Sciences", The Scenario of Indian Women: Past, Present and Future, ISBN:978–93–91373–19–1, June 2021, Pp.47–55.
8. Naveen Chandra (2009), "Labour Rights and the working Poor, Indian Journal of Labour Economics, 52(3),1–8.
9. Dr Puttaraj K. (2021), "Globalisation–Myths and Realities", The Scenario of Indian Women: Past, Present and Future", ISBN:978–93–91373–19–1, June 2021, Pp.110–116.
10. Peter Auer and Praveen Jha (2009), "Labour Market Reforms in India: Barking up the wrong Tree, Indian Journal of Labour Economics, 52(1), 1–12.